1. ಎಲ್ಲಾ ಬೀಜ ವಿತರಣಾ ಸಂಸ್ಥೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸೂರ್ಯಪಾನ (ಸೂರ್ಯಕಾಂತಿ) ಬೀಜಗಳನ್ನು ಸಂಗ್ರಹಿಸಿ ವಿತರಣೆ ಮಾಡಲು ವಿನಂತಿಸಿಕೊಳ್ಳಲಾಗಿದೆ.

2. ಕಳೆದ ಹಂಗಾಮಿಗಳಲ್ಲಿ ಪ್ರಮಾಣಿತ ಸೂರ್ಯಪಾನ ಬೀಜಗಳನ್ನು ಉಪಯೋಗಿಸಿ ಬೆಳೆದಂತಹ ರೈತರನ್ನು ಗುರುತಿಸಿ ಅವರ ಬಳಿ ಇರುವ ಬೀಜಗಳ ದಾಸ್ತಾನಿನ ಗುಣಮಟ್ಟವನ್ನು ಪರೀಕ್ಷಿಸಿದ ನಂತರ ರೈತರಿಂದ ರೈತರಿಗೆ ವಿತರಣೆ ಮಾಡಲು ವ್ಯವಸ್ಥೆ ಮಾಡುವಂತೆ ಇಲಾಖಾ ಸಿಬ್ಬಂದಿ ವರ್ಗಕ್ಕೆ ತಿಳಿಸಲಾಗಿದೆ.

3. ಸೂರ್ಯಕಾಂತಿ ಬಿತ್ತನೆ ಬೀಜದ ಸರಬರಾಜನ್ನು ಉಸ್ತುವಾರಿ ಮಾಡಲು ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಟಾಸ್ಕ್‌ಫೋರ್ಸ ಸಮಿತಿಗಳನ್ನು ರಚಿಸಲಾಗಿದೆ.

ಇ) ಸೂಕ್ತವಾದ ಜಮೀನು ಸಿಗದೇ ಇರುವ ಕಾರಣ ಮುಂಡರಗಿ ತಾಲೂಕಿನಲ್ಲಿ ಇಲ್ಲಿಯವರೆಗೂ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ. ಸೂಕ್ತವಾದ ಜಮೀನು ಸಿಕ್ಕ ನಂತರ ಹಣಕಾಸಿನ ವ್ಯವಸ್ಥೆ ಮಾಡಿಕೊಂಡು ಧಾರವಾಡದ ಕೃಷಿ ವಿಶ್ವವಿದ್ಯಾನಿಲಯವು ಕೃಷಿ ಸಂಶೋಧನಾ ಕೇಂದ್ರವನ್ನು ಪ್ರಾರಂಭ ಮಾಡುವುದು.

ಮುಂಡರಗಿ ನಗರಸಭೆ ಹದ್ದಿನಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚುವ ಬಗ್ಗೆ

367. ಶ್ರೀ ಕೆ.ಹೆಚ್. ಹಿರಡಗಿ (ಮುಂಡರಗಿ):– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ನಗರಸಭೆ ಹದ್ದಿನಲ್ಲಿ ನಿವೇಶನ ರಹಿತ ಹರಿಜನ, ಗಿರಿಜನ ಹಾಗೂ ಬಡಜನ ಬಹಳ ಇರುವುದರಿಂದ ಇವರಿಗೆ ನಿವೇಶನ ಹಾಗೂ ಮನೆ ಒದಗಿಸುವ ಯೋಜನೆ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಕೈಗತ್ತಿಕೊಳ್ಳಲಾಗುವುದು?

ಆ) ಮುಂಡರಗಿ ನಗರದಲ್ಲಿ ಒಳಚರಂಡಿ ಹಾಗೂ ರಸ್ತೆ ಇತರ ವೆಚ್ಚಗಳಿಗೆ ತಗಲುವ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಲು ವರುಷದ ಹಿಂದೆಯೇ ಕೇಳಲಾಗಿ ಇದುವರೆವಿಗೂ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು? ಹಾಗಿದ್ದಲ್ಲಿ ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):–

ಅ) ಮುಂಡರಗಿ ಪುರಸಭೆ ಹದ್ದಿಯಲ್ಲಿ 130 ನಿವೇಶನಗಳನ್ನು ತಯಾರಿಸಿ ಈಗಾಗಲೇ 130 ಫಲಾನುಭವಿಗಳಿಗೆ ಹಂಚಲಾಗಿದೆ. ಅದರಲ್ಲಿ 46 ಫಲಾನುಭವಿಗಳು ಹರಿಜನ, ಗಿರಿಜನರಿದ್ದು ಉಳಿದವರು ಇತರ ಜನಾಂಗದವರಿರುತ್ತಾರೆ.

ಆ) ಸರ್ಕಾರವು ಈ ಕೆಳಕಂಡ ಮೊತ್ತವನ್ನು ಮಂಜೂರು ಮಾಡಿ ಈಗಾಗಲೇ ಬಿಡುಗಡೆ ಮಾಡಿದೆ.

ವರ್ಷ	ವಿವೇಚನಾತ್ಮಕ ಅನುದಾನ (ಕುಡಿಯುವ ನೀರಿಗಾಗಿ, ರಸ್ತೆ ಮತ್ತು ಅಭಿವೃದ್ಧಿಗೆ)	
1988–89	1. ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ದಿನಾಂಕ: 13.4.89	ರೂ. 1,00,000
	2. ಮುಂಡರಗಿ ಪುರಸಭೆಗೆ ದಿನಾಂಕ: 11.5.89	ರೂ. 1,00,000
	ಒಟ್ಟು:	ರೂ. 2,00,000

ಮೂಡಬಿದ್ರಿ ಬೈಪಾಸ್ ರಸ್ತೆ ಬಗ್ಗೆ

464. ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆಯಲ್ಲಿ ಬೈಪಾಸ್ ರಸ್ತೆ ರಚಿಸುವ ಯೋಜನೆ ಯಾವ ಹಂತದಲ್ಲಿದೆ?

ಆ) ಹಾಗಿದ್ದಲ್ಲಿ, ಆಗಲು ಕಿರಿದಾದ ರಸ್ತೆ ಇರುವುದರಿಂದ ವಾಹನ ಸಂಚಾರಕ್ಕೆ ಸಾಕಷ್ಟು ತೊಂದರೆಯಾಗಿ ಆಗಾಗ್ಗೆ ವಾಹನ ಸಂಚಾರ ನಿಲುಗಡೆಯಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?